7. ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಅಧಿವೇಶನಕ್ಕೆ ಬರುತ್ತಿರುವಾಗ ಮುಖ್ಯ ಮಂತ್ರಿಗಳವರೇ ಹೋಗಿ ಸ್ವಾಗತ ಮಾಡಿದ್ದಕ್ಕೆ ವಿರೋಧ.

SRI K.N. SUBBAREDDY:- SiR, I have a point of order.

The Bulletin issued to members regarding Address by the Governor at the Commencement of the Session and place of Meeting of the Assembly; reads thus:

"Hon'ble Members are hereby informed that as required by Clause (1) of Articles 176 of the Constitution, the Governor will address the Legislative Assembly and the Legislative Council assembled together in the Legislative Assembly Chamber, Vidhana Soudha, Bangalore at 11.00 A.M. on wednesday the 27th October, 1999.

As soon as the Governor concludes the Address and leaves the Chamber, the Legislative Assembly will sit for a short while to transact some formal business.

Though that procedure was there, you have not observed it. That is one thing.

The second procedure to be observed:

``The Governor will arrive at the Grand Steps of the main entrance to the Vidhana Soudha at 10.55 A.M. alighting from his car, the Governor will be received by the Hon'ble Speaker, Hon'ble Chairman and the Secretaries of Legislature.

At the main entrance a procession will be formed in the follwing order: The Secretary, Legislative Assembly, Secretary Legislative Council, Hon'ble Speaker and the Hon'ble Chairman."

The procedure is, the Chief Minister cannot accompany the procession.

ಅಧ್ಯಕ್ಷರು: ಅನೇಕ ಸಲ ಚೀಫ್ ಮಿನಿಸ್ಟರ್ ಸಹ ಅಕಾಂಪನಿ ಮಾಡಿದ್ದಾರೆ.

SRI K.N.SUBBAREDDY: As per the procedure given, Chief Minister cannot accompany.

ಅಧ್ಯಕ್ಷರು:- ಲೋಕಸಭೆಯಲ್ಲಿ ಕೂಡ ಮಾನ್ಯ ಪ್ರಧಾನ ಮಂತ್ರಿಗಳು ಅಕಾಂಪನಿ ಮಾಡಿದ್ದಾರೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ನೋಟಿಫಿಕೇಶನ್ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಪ್ರೊಸೆಷನ್‌ನಲ್ಲಿ ಇರುವ ಹಾಗೇ ಇಲ್ಲ.

ಶ್ರೀ ಕೆ.ಹೆಚ್.ರಂಗನಾಥ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಎನ್. ಸುಬ್ಬಾರೆಡ್ಡಿಯವರು ಈ ಪ್ರಶ್ನೆಯನ್ನು ಎತ್ತುವುದಕ್ಕೆ ಮುಂಚೆ ಈ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕಾಗಿತ್ತು. ರೂಲ್ಸ್ ಆಫ್ ಪ್ರೋಸೀಜರ್ ಪ್ರಕಾರ ನಿನ್ನೆ ಉಭಯ ಸದನಗಳನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ ನಂತರ ಮತ್ತೆ ನಮ್ಮ ಸಭೆ ಇಲ್ಲಿ ಸೇರಿದ ಮೇಲೆಯೇ ತಾವು ಸಭೆಯನ್ನು ಮುಂದೂಡಿದ್ದೀರಿ. ಆ ಫಾರ್ಮಾಲಿಟೀಸ್ ಅಬ್ಸರ್ವ್ ಆಗಿದೆ. It is very bad on the part of the Hon'ble Member... ಅಧ್ಯಕ್ಷರ ಮೇಲೆ ರಿಫ್ಲೆಕ್ಷನ್ ಆಗುವಂತಹ ರೀತಿಯಲ್ಲಿ ಪ್ರಸ್ತಾಪ ಮಾಡುವಂಥಾದ್ದು ಒಳ್ಳೆಯದಲ್ಲ. ದಯಮಾಡಿ ತಾವು ಈ ಬಗ್ಗೆ ಒಂದು ರೂಲಿಂಗ್ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಇಂತಹ ಸಣ್ಣಪುಟ್ಟ ವಿಚಾರಕ್ಕೆಲ್ಲಾ ಗೊಂದಲಮಯ ವಾತಾವರಣ ನಿರ್ಮಾಣ ಮಾಡುವಂಥಾದ್ದು ಒಂದು ಹವ್ಯಾಸವಾಗಿ ಬಿಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾನು ಹೇಳುತ್ತಾ ಇಲ್ಲ, ಇದನ್ನು ವಿಷಯಾಂತರ ಮಾಡುತ್ತಿದ್ದಾರೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ ಮಾನ್ಯ ರಾಜ್ಯಪಾಲರ ಭಾಷಣವಾದ ಮೇಲೆ ಪ್ರತ್ಯೇಕವಾಗಿ ಸಭೆ ಸೇರಿ ಬಿಸಿನೆಸ್ ಟ್ರಾನ್‌ಝಾಕ್ಷನ್ ಆಗಿದೆ, ತದನಂತರ ತಾವು ಸಭೆಯನ್ನು ಅಡ್‌ಜರ್ನ್ ಮಾಡಿದ್ದೀರಿ. It is a very sad reflection on the Chair. Hon'ble Member will have to remember all these things.

ಅಧ್ಯಕ್ಷರು: ಅದರ ಬಗ್ಗೆ ನಾಳೆ ನಾನು ರೂಲಿಂಗ್ ಕೊಡುತ್ತೇನೆ.

8. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

+ ಶ್ರೀ ಎಸ್.ಜಿ.ನಂಜಯ್ಯನ ಮಠ್(ಗುಳೇದಗುಡ್ಡ): ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಪ್ರಸ್ತಾಪಿಸಿರುವಂತಹ ಭಾಷಣವನ್ನು ನಾನು ಸಮರ್ಥಿಸುತ್ತಾ, ತಮ್ಮನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತಾ ಎರಡು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಶ್ರೀ ಹೆಚ್.ಸಿದ್ದಯ್ಯನವರಿಂದ ಪ್ರಾರಂಭವಾದ ಒಂದು ಒಳ್ಳೆಯ ಪರಂಪರೆಯಾಗಿದ್ದು ಈ ಅಧ್ಯಕ್ಷ ಸ್ಥಾನದ ಘನತೆ, ಗೌರವ ಏನಿದೆ- ಇದು ಶ್ರೀಮಾನ್ ಎಸ್.ಆರ್.ಕಂಠಿ, ಶ್ರೀ ಕೊರಾವಳ್, ಶ್ರೀಮತಿ ಕೆ.ಎಸ್.ನಾಗರತ್ನಮ್ಮ, ಶ್ರೀ ಬಣಕಾರ್, ಶ್ರೀ ಡಿ.ಬಿ.ಚಂದ್ರೇಗೌಡ, ಶ್ರೀ ಕೆ.ಹೆಚ್.ರಂಗನಾಥ್, ಇವರುಗಳು ಮತ್ತು ಇವತ್ತಿನ ಮುಖ್ಯಮಂತ್ರಿಯಾಗಿರುವಂತಹ ಶ್ರೀ ಎಸ್.ಎಂ.ಕೃಷ್ಣರವರು ಮತ್ತು ಈ ಹಿಂದಿನ ಸರ್ಕಾರದಲ್ಲಿ ಅಧ್ಯಕ್ಷರಾಗಿದ್ದಂತಹ ಮಾನ್ಯ ರಮೇಶ್ ಕುಮಾರ್‌ರವರು ಇವರೆಲ್ಲರ ಅವಧಿಯಲ್ಲಿ ಆ ಒಂದು ಘನತೆ, ಗೌರವ, ಗಾಂಭೀರ್ಯವನ್ನು ಹೆಚ್ಚಿಸಿಕೊಂಡು ಬಂದಿರುವಂತಹ ಇತಿಹಾಸವಿದೆ. ಈ ವಿಚಾರದಲ್ಲಿ ತಾವು ಕೂಡ